ತಿಳಿಸಿ ಇದಕ್ಕೆ ಉತ್ತರವನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇನೆ. ಈ ಬಗ್ಗೆ ಪೋಲೀಸರಿಗೆ ಕಂಪ್ಲೈಂಟ್ ಕೊಟ್ಟರೆ ತೆಗೆದುಕೊಳ್ಳಲಿಲ್ಲ ಎಂದು ಅವರು ಹೇಳುತ್ತಾರೆ. ಹಾಗೆ ತೆಗೆದುಕೊಳ್ಳದೇ ಹೋದರೆ ಪ್ರೈವೇಟ್ ಕಂಪ್ಲೈಂಟ್ ಅನ್ನಾದರೂ ಕೊಡುವುದಕ್ಕೆ ಅವಕಾಶ ಇತ್ತಲ್ಲ.

(ಗೊಂದಲ)

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಮಾನ್ಯ ಮಂತ್ರಿಗಳು, ಸವಂಜಸವಾಗಿ ಉತ್ತರ ಕೊಡಲಿಲ್ಲ. ಈ ರೀತಿ ಹೇಳುವುದು ಸರಿಯೇ ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಬಹಳ ಹಗುರವಾಗಿ ಮಾತನಾಡುತ್ತಾರೆ.

ಅಧ್ಯಕ್ಷರು.—ದಯವಿಟ್ಟು ತಾವು ಕೂತುಕೊಳ್ಳಿ, ನಿಯಮಕ್ಕೆ ನೀವಿದಂತೆ ಈ ವಿಷಯ ಇರುವುದರಿಂದ ನಾನು ಇದಕ್ಕೆ ಉತ್ತರ ತರಿಸಿಕೊಡುತ್ತೇನೆ. ಮಾನ್ಯ ಮಂತ್ರಿಗಳೂ ಸಹ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಇದಕ್ಕೆ ಉತ್ತರ ಒದಗಿಸುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ತಾವು ಕೂತುಕೊಳ್ಳಿ.

ಶ್ರೀ ಪ್ರತಾಪ ಚಂದ್ರಶೆಟ್ಟಿ —ಯಾವಾಗ ಒದಗಿಸುತ್ತೀರಾ ಸ್ವಾಮಿ ?

ಅಧ್ಯಕ್ಷರು.—ಅವರು ಬರಲಿ ಹೇಳುತ್ತೇನೆ.

೩) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸುಮಾರು ೧೭ ಮಂದಿ ಹಂಗಾಮಿ ಅಧ್ಯಾಪಕರನ್ನು ಕೆಲಸದಿಂದ ತೆಗೆದು ಹಾಕಿರುವ ಬಗ್ಗೆ.

ಶ್ರೀ ವೇದಾಂತ ಹೆಬ್ಬಿಗೆ.— ಮಾನ್ಯ ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸುಮಾರು ೧೭ ಮಂದಿ ಹಂಗಾಮಿ ಅಧ್ಯಾಪಕರನ್ನು ಕೆಲಸದಿಂದ ತೆಗೆದು ಹಾಕಿರುವುದು ಆತಂಕದ ಸಂಗತಿಯಾಗಿದೆ, ಇವರುಗಳು ಸುಮಾರು ೭ ವರ್ಷದಿಂದ ೧೪ ವರ್ಷದವರೆಗೆ ಸೇವೆ ಸಲ್ಲಿಸಿದಾರೆ. ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಟ್ಟು ೭೦ ಮಂದಿ ಹಂಗಾಮಿ ಅಧ್ಯಾಪಕರಿದ್ದಾರೆ. ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಇವರಿಗೆ ಕೆಲಸದ ಭದ್ರತೆಯನ್ನು ಕೊಡುವ ಬದಲು ತೆಗೆದು ಹಾಕಿರುವುದು ವಿಶ್ವವಿದ್ಯಾನಿಲಯದ ಮಾನವೀಯತೆಯ ಲಕ್ಷಣವಲ್ಲ. ಕೂಡಲೇ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಇವರುಗಳನ್ನು ಖಾಯಂಗೊಳಿಸುವ ಸೂತ್ರವೊಂದನ್ನು ಕಂಡುಹಿಡಿದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶಾಂತಿ ಪರಿಸ್ಥಿತಿ ಕದಡದಂತೆ ಕ್ರಮ ಕೈಗೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವೇದಾಂತ ಹೆಬ್ಬಿಗೆಯವರು ಏನು ಹೇಳಿದ್ದಾರೆ ಈ ವಿಷಯದಲ್ಲಿ ಆಧ್ಯಿಯ ಉಪಕುಲಪತಿಗಳೊಂದಿಗೆ ಚರ್ಚೆ ಮಾಡಿ ಈ ವಿಷಯವನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

೪) ಮೈಸೂರು ಲ್ಯಾಂಪ್ಸ್‌ನ ೧೨೦೦ ಕಾರ್ಮಿಕರು ಮುಷ್ಕರ ಮಾಡುತ್ತಿರುವ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ.—ಮೈಸೂರು ಲ್ಯಾಂಪ್ಸ್‌ನ ೧೨೦೦ ಕಾರ್ಮಿಕರು ಸುಮಾರು ಒಂದು ತಿಂಗಳಿನಿಂದ ಮುಷ್ಕರದಲ್ಲಿದ್ದಾರೆ. ಬಿಚ್. ಎಂ. ಟಿ. ವಿದ್ಯುದ್ದೀಪ ತಯಾರಿಸುವ ಕಾರ್ಮಿಕರಿಗೆ ಸರಿಸಮಾನವಾದ ವೇತನ, ಕರ್ನಾಟಕಸರ್ಕಾರದ ಇತರೇ ಸಾರ್ವಜನಿಕ ಉದ್ಯಮಗಳಾದ ಎನ್ ಜಿ. ಇ. ಎಫ್. ನಲ್ಲಿರುವಂತೆ, ಎಲ್. ಟಿ. ಸಿ. ರಜೆ ಮೊದಲಾದ ಸೌಲಭ್ಯಗಳ ಬೇಡಿಕೆಯನ್ನು ಮಂಡಿಟ್ಟಿರುತ್ತಾರೆ.

ಈ ಬಗ್ಗೆ ಕೈಗಾರಿಕಾ ಮಂತ್ರಿಗಳು ೨೫-೭-೮೫ ರಂದು ಕರೆದ ಸಭೆಯಲ್ಲಿ ಕೊಟ್ಟ ಸೂಚನೆಗಳಿಗೂ ವಿರುದ್ಧವಾಗಿ ಆಡಳಿತ ವರ್ಗ, ಕಾರ್ಮಿಕರಿಗೆ ಈಗ ಇರುವ ಸೌಲಭ್ಯಗಳನ್ನು ತೆಗೆಯಲು ಪ್ರಯತ್ನಿಸಿ ಪರಿಸ್ಥಿತಿ ಬಿಗಡಾಯಿಸುವಂತೆ ಮಾಡಿದೆ. ಇಂದು ಈ ಕಾರ್ಮಿಕರು ವೆಂಕಟಪ್ಪನಗೆಯಲ್ಲಿ ವಿಧಾನಸೌಧಕ್ಕೆ ಬಂದು ಧರಣಿ ಹೂಡುತ್ತಿದ್ದಾರೆ. ಈ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಮಾನ್ಯ ಕೈಗಾರಿಕಾ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.